ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗೆ ನಿಗದಿಯಾದ ಹಣ

2550-ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ 1995-96ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಿರುವ ಹಾಗೂ ಕೈಗೊಂಡಿರುವ ರಸ್ತೆ ಕಾಮಗಾರಿಗಳು ಯಾವುವು? ಹಾಗೂ ಇದಕ್ಕಾಗಿ ನಿಗಧಿಪಡಿಸಿರುವ ಹಣದ ಮೊತ್ತ ಎಷ್ಟು? (ವಿವರ ನೀಡುವುದು)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು)

ಅ) ಕೈಗೊಂಡಿರುವ ಕಾಮಗಾರಿಗಳು :

1) ಅಂಚಟಗೇರಿ ಚಿನ್ನಾಪುರ ಚವರಗುಡ್ಡ ರಸ್ತೆ ಸುಧಾರಣೆ.
2) ಸುಳ್ಯ ಬೆಂಗೇರಿ ರಸ್ತೆಗೆ ಡಾಂಬರೀಕರಣ ಕಿಮೀ. 1 ರಿಂದ 4ರ ವರೆಗೆ
3) ಸುಳ್ಯ ಬೆಂಗೇರಿ ರಸ್ತೆ ಬದಿಯ ಬದಿಗಳನ್ನು ಬಲಪಡಿಸುವುದು.
4) ಯಮನೂರ ಶಿರ್ಲಾಪೂರ ಬ್ಯಾಕಟ್ಟಿ ರಸ್ತೆ ಮರು ಡಾಂಬರೀಕರಣ ಕಿಮೀ. 18 ರಿಂದ 19.20.
5) ಉಣಕಲ್ ರಸ್ತೆ ಕಿ.ಮೀ. 4 ರಿಂದ 7ರ ವರೆಗೆ ಮರು ಖಡಿ ಹಾಕುವುದು.
6) ಸುಳ್ಯ ಬೆಂಗೇರಿ ರಸ್ತೆಗೆ ಕಿಮೀ. 9 ರಿಂದ 10ರ ವರೆಗೆ ಮೆಟಲಿಂಗ್ ಮಾಡುವುದು.
7) ಕಾರವಾರ ಬಳ್ಳಾರಿ ರಸ್ತೆ ಕಿ.ಮೀ. 141.70ರಲ್ಲಿ ಸೇತುವೆ ನಿರ್ಮಾಣ.
8) -ಸದರ- ಕಿ.ಮೀ. 151.90ರಲ್ಲಿ ಸೇತುವೆ ನಿರ್ಮಾಣ.
9) ಉಣಕಲ್ ಹುಬ್ಬಳ್ಳಿ ರಸ್ತೆ ಡಿಮೆಟಲಿಂಗ್ ಒದಗಿಸುವುದು ಹಾಗೂ ಡಾಂಬರೀಕರಣ.
10) ಕಾರವಾರ ಬಳ್ಳಾರಿ ರಸ್ತೆ ಕಿಮೀ. 133ರಿಂದ 144ರ ವರೆಗೆ ವಿಸ್ತರಣೆ ಮತ್ತು ಡಾಂಬರೀಕರಣ ಮಾಡುವುದು.

ಇದಕ್ಕಾಗಿ ಒಟ್ಟು ನಿಗಧಿಪಡಿಸಿದ ಹಣದ ಮೊತ್ತ 14.65 ಲಕ್ಷ ರೂ.ಗಳು.

1995-96ನೇ ಸಾಲಿನಲ್ಲಿ ಹೊಸ ಕಾಮಗಾರಿಗಳನ್ನು ಇನ್ನೂ ಕೈಗೊಂಡಿರುವುದಿಲ್ಲ.

ಟಿ. ನರಸೀಪುರ ಪಂಚಾಯಿತಿಯಲ್ಲಿ ಕುಡಿಯುವ ನೀರಿನ ತೊಂದರೆ

2224 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ. ನರಸೀಪುರ ಪಂಚಾಯ್ತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನೀರಿನ ತೊಂದರೆ ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಶಾಶ್ವತವಾದ ನೀರಿನ ಬವಣೆ ತಪ್ಪಿಸಲು ವ್ಯವಸ್ಥಿತವಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು.

ಆ) 1995-96ನೇ ಸಾಲಿನಲ್ಲಿ 3 ಹೊಸ ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಒಂದು ಕೊಳವೆಬಾವಿಯನ್ನು ಹಾಲಿ ಇರುವ ಮೇಲ್ಪಟ್ಟ ಜಲಸಂಗ್ರಹಾಲಯಕ್ಕೆ ಸಂಪರ್ಕ

ಕಲ್ಪಿಸಲಾಗಿದೆ. ಉಳಿದ ಎರಡು ಕೊಳವೆಬಾವಿಗಳಿಂದ ಎರಡು ಕಿರುನೀರು ಸರಬರಾಜು ಯೋಜನೆಗಳನ್ನು ಅಳವಡಿಸಲಾಗಿದೆ. ಹಾಲಿ ಇರುವ ಪಂಪುಸೆಟ್ಟುಗಳನ್ನು ದುರಸ್ತಿಗೊಳಿಸಲಾಗಿದೆ.

ಇ) ಹಾಲಿ ಇರುವ ಕುಡಿಯುವ ನೀರಿನ ಯೋಜನೆಯನ್ನು ಅಭಿವೃದ್ಧಿಪಡಿಸಲು ರೂ. 28.00 ಲಕ್ಷದ ಒಂದು ರೇಖಾ ಅಂದಾಜನ್ನು ತಯಾರಿಸಲಾಗಿದೆ. ಇದು ಪರಿಶೀಲನೆಯಲ್ಲಿದೆ.

ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಅನುದಾನ

2324 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್‌ಗಳಿಗೆ ಅನುದಾನ ಕೊಡುವಲ್ಲಿ ಜನಸಂಖ್ಯೆ ಹಾಗೂ ಭೂ ಕಂದಾಯ ಮುಖ್ಯವಾದ ಅಂಗವೆಂಬುದು ನಿಜವೇ?

ಆ) ಇದರ ಸಂಗಡ ಭೂ ವಿಸ್ತಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವುದು ನ್ಯಾಯವೆಂದು ಸರ್ಕಾರವು ಉದ್ದೇಶಿಸುವುದೇ?

ಇ) ಹೀಗೆ ಮಾಡಿದ್ದಲ್ಲಿ ಗುಡ್ಡಗಾಡು, ದುರ್ಗಮ ಪ್ರದೇಶದ ಜನತೆಗೆ ಅನ್ಯಾಯವಾಗುವುದಿಲ್ಲವೆ?

ಈ) ತಮಗೆ ಹಾಗೆ ಅನಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಜಿಲ್ಲಾ ಪಂಚಾಯಿತಿಗಳಿಗೆ ಯೋಜನಾ ಅನುದಾನವನ್ನು ಕೊಡುವಲ್ಲಿ ಜನಸಂಖ್ಯೆಯು ಒಂದು ಮುಖ್ಯ ಅಂಗ. ಭೂ ಕಂದಾಯ ಪರಿಗಣಿಸಿಲ್ಲ.

ಆ) ಇ) ಮತ್ತು ಈ) ಭಾರತದ ರಾಜ್ಯಾಂಗದ 73ನೇ ತಿದ್ದುಪಡಿಯ ಆರ್ಟಿಕಲ್ 243-ಐ ಮತ್ತು 74ನೇ ತಿದ್ದುಪಡಿಯ 243-ವೈ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ (1993 (ಕರ್ನಾಟಕ ಕಾಯ್ದೆ 14, 1993ರ) ಸೆಕ್ಷನ್ 267ರಂತೆ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ : ಆರ್‌ಡಿಪಿ. 313 ಜಡ್‌ಪಿಎಸ್. 93, ದಿನಾಂಕ 10.6.94ರಲ್ಲಿ ಕರ್ನಾಟಕ ರಾಜ್ಯ ವಿತ್ತೀಯ ಆಯೋಗವನ್ನು ರಚಿಸಿದೆ. ಈ ಅಧಿಸೂಚನೆಯ ಕಂಡಿಕೆ 4(iii) ನಂತೆ ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಅನುದಾನದ ಹಂಚಿಕೆಯ ಸೂತ್ರಗಳನ್ನು ಸಹ ಶಿಫಾರಸ್ಸು ಮಾಡಬೇಕು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿತ್ತೀಯ ಆಯೋಗದ ಶಿಫಾರಸ್ಸುಗಳು ಬಂದ ನಂತರ ಸರ್ಕಾರವು ಈ ವಿಷಯದ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು.

ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತ್‌ನಲ್ಲಿ ಗುತ್ತಿಗೆದಾರರಿಗೆ ರಸ್ತೆಗಳ ಬಾಬ್ತು ಬರಬೇಕಾದ ಹಣ

1919 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತ್‌ನಲ್ಲಿ ಕಳೆದ ವರ್ಷದ ಗುತ್ತಿಗೆದಾರರಿಗೆ ರಸ್ತೆಗಳ ಬಾಬ್ತು ಬೇಕಾಗಿದೆ ಹಣ ಎಷ್ಟು?

ಆ) ರಸ್ತೆ ಕೆಲಸ ಮಾಡದೆ ಹಣ ಪಡೆದಿರುವ ಹಾಗೂ ಪಡೆಯಲು ಪ್ರಯತ್ನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ತನಿಖೆ ಮಾಡಲು ಆದೇಶ ಮಾಡಲಾಗುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :